For More Information Visit: www.kpscvaani.com

ಸಂಖ್ಯೆ: ಎನರ್ಜಿ 255 ಪಿಎಸ್‌ಆರ್ 2021
ಲಗತ್ತು:

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ,
ಬೆಂಗಳೂರು, ದಿನಾಂಕ: 19.01.2022

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ ಅಧ್ಯಕ್ಷರ ಹುದ್ದೆಗೆ ನೇಮಕಾತಿ ಮಾಡಲು ಅರ್ಜಿ ಆಹ್ವಾನಿಸುವ ಪ್ರಕಟಣೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು (KERC) ಒಂದು ಸ್ವತಂತ್ರ ನಿಯಂತ್ರಣ ಸಂಸ್ಥೆಯಾಗಿದ್ದು, ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರನ್ನೊಳಗೊಂಡಿರುತ್ತದೆ. ಆಯೋಗದ ಅಧ್ಯಕ್ಷರ ಹುದ್ದೆಯು ದಿನಾಂಕ: 04.01.2022 ರಿಂದ ತೆರವಾಗಿರುವುದರಿಂದ, ತೆರವಾಗಿರುವ ಅಧ್ಯಕ್ಷರ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿಗಾಗಿ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ವಿದ್ಯುಚ್ಛಕ್ತಿ ಕಾಯ್ದೆ, 2003 ಸೆಕ್ಷನ್ 85 (1)ರನ್ವಯ ಆಯ್ಕೆ ಸಮಿತಿಯನ್ನು ರಚನೆ ಮಾಡಲಾಗಿದೆ.

1. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ಆಯ್ಕೆ ಮತ್ತು ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2. **ಆಯೋಗದ ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಜಿದಾರರ ವಿದ್ಯಾರ್ಹತೆ ಮತ್ತು ಅನುಭವ:**

ಅ) ಆಯೋಗದ ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸಲು ಇಚ್ಛಿಸುವ ಅರ್ಜಿದಾರರುಗಳು ಇಂಜಿನಿಯರಿಂಗ್, ಆರ್ಥಿಕ, ಅರ್ಥಶಾಸ್ತ್ರ, ವಾಣಿಜ್ಯ ಶಾಸ್ತ್ರ, ಕಾನೂನು ಅಥವಾ ಆಡಳಿತ ವಿಷಯಗಳಲ್ಲಿ ಪರಿಪೂರ್ಣ ಜ್ಞಾನ, ನಿಷ್ಠೆ ಮತ್ತು ಅನುಭವವುಳ್ಳವರಾಗಿರುವುದಲ್ಲದೆ ಈ ವಿಷಯಗಳನ್ನು ವ್ಯವಹರಿಸುವಲ್ಲಿ ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಿದವರಾಗಿರಬೇಕು.

ಆ) ಭಾರತದ ಪ್ರಜೆಯಾಗಿರಬೇಕು ಮತ್ತು ಕನ್ನಡ ವ್ಯವಹಾರ ಜ್ಞಾನವುಳ್ಳವರಾಗಿರಬೇಕು.

ಇ) ಅಭ್ಯರ್ಥಿಯು ಕನಿಷ್ಠ 25 ವರ್ಷಗಳ ಅನುಭವವುಳ್ಳವರಾಗಿರತಕ್ಕದ್ದು ಹಾಗೂ ಈ ವಲಯದಲ್ಲಿ ಹಿರಿಯ ಹುದ್ದೆಯಲ್ಲಿ ಸೇವೆ ಸಲ್ಲಿಸಿರಬೇಕು.

For More Information Visit: www.kpscvaani.com

3. ಅಧ್ಯಕ್ಷರು ಆಗಿ ನೇಮಕಾತಿಯಾದ ದಿನಾಂಕದಿಂದ ಐದು (5) ವರ್ಷಗಳ ಅವಧಿಗೆ ಅಥವಾ ಅವರ ವಯಸ್ಸು 65 ವರ್ಷ ಪೂರ್ಣಗೊಳ್ಳುವವರೆಗೆ, ಇವುಗಳಲ್ಲಿ ಯಾವುದು ಮೊದಲೊ ಆ ಅವಧಿಯವರೆಗೆ ಅಧ್ಯಕ್ಷರು ಅಧಿಕಾರವನ್ನು ಹೊಂದಿರುತ್ತಾರೆ.

   ಅಧ್ಯಕ್ಷರ ಅಧಿಕಾರದ ಅವಧಿ ಪೂರ್ಣಗೊಂಡ ನಂತರ ಅವರು ಆಯೋಗದಲ್ಲಿ ಅದೇ ಹುದ್ದೆಗೆ ಮರು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

4. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಕರ್ತವ್ಯ ನಿರ್ವಹಣೆಗೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿದಲ್ಲಿ ಅಂತಹ ಅಭ್ಯರ್ಥಿಯು ಅರ್ಹರಾಗಿರುವುದಿಲ್ಲ.

5. **ಸಂಭಾವನೆ:** ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರು ಮತ್ತು ಇತರ ಸದಸ್ಯರುಗಳ ಸಂಭಾವನೆ/ಭತ್ಯೆ ಮತ್ತು ಸೇವಾ ನಿಯಮಗಳು), ನಿಯಮಗಳು 2000 ರಲ್ಲಿ ಹಾಗೂ ಕಾಲಕಾಲಕ್ಕೆ ಮಾಡಿದ ತಿದ್ದುಪಡಿಗಳ ಪ್ರಕಾರ ಇರುತ್ತದೆ.

6. **ಅರ್ಜಿಯನ್ನು ಸಲ್ಲಿಸಲು ಕಡೆಯ ದಿನಾಂಕ:** ಅರ್ಜಿದಾರರು ಅರ್ಜಿಗಳನ್ನು ಪ್ರಮಾಣ ಪತ್ರ ಮತ್ತು ಘೋಷಣಾ ಪತ್ರಗಳೊಂದಿಗೆ ನೊಂದಾಯಿತ ಅಂಚೆ/ ಕೊರಿಯರ್ ಮೂಲಕ/ ಖುದ್ದಾಗಿ ಅಥವಾ E-mail (prs.energy@gmail.com) ಮೂಲಕ (ಸ್ಕ್ಯಾನ್ ಮಾಡಿದ ದಾಖಲೆಗಳ ಪ್ರತಿಗಳೊಂದಿಗೆ) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ, ಕೊಠಡಿ ಸಂಖ್ಯೆ: 236, 2ನೇ ಮಹಡಿ, ವಿಕಾಸ ಸೌಧ, ಡಾ. ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು 560 001 ಇವರಿಗೆ ದಿನಾಂಕ: 07.03.2022 ರ ಸಂಜೆ 5.30ರೊಳಗಾಗಿ ಅಥವಾ ಮುಂಚಿತವಾಗಿ ಕಛೇರಿ ಕೆಲಸದ ಸಮಯದಲ್ಲಿ ಸಲ್ಲಿಸುವುದು.

7. ಕವಿನಿ ಆಯೋಗದ ಅಧ್ಯಕ್ಷರ ಹುದ್ದೆಗೆ ಅರ್ಜಿ ಸಲ್ಲಿಸುವ ಅರ್ಜಿದಾರರು ಸಹಿಯೊಂದಿಗೆ ನಿಗಧಿತ ನಮೂನೆ–1 (ಅನುಬಂಧ) ರಲ್ಲಿ ಸಲ್ಲಿಸಬೇಕು:

8. ಅಭ್ಯರ್ಥಿಯು ತನಗೆ ಯಾವುದೇ ನೇಮಕಾತಿ ಅಥವಾ ಉದ್ಯೋಗದಲ್ಲಿ ಅಥವಾ ಸಮಾಲೋಚನೆ ಒಪ್ಪಂದ, ವ್ಯವಸ್ಥೆಯಲ್ಲಿ ವಾಣಿಜ್ಯ ಅಥವಾ ಆರ್ಥಿಕ ಹಿತಾಸಕ್ತಿ/ಸಂಬಂಧ ತನ್ನ ಹೆಸರಿನಲ್ಲಾಗಲಿ ಅಥವಾ ಸಂಬಂಧಿಕರ ಹೆಸರಿನಲ್ಲಾಗಲಿ ಹೊಂದಿರುವುದಿಲ್ಲವೆಂದು ಘೋಷಣಾ ಪತ್ರ ನೀಡುವುದು.

For More Information Visit: www.kpscvaani.com

9. ಅರ್ಜಿದಾರರು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಕರ್ತವ್ಯಕ್ಕೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿಲ್ಲದಿರುವ ಬಗ್ಗೆ ಘೋಷಣಾ ಪತ್ರ ನೀಡುವುದು.

10. ಅರ್ಜಿದಾರರು ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ಆಯ್ಕೆಗೊಂಡು ನೇಮಕ ಹೊಂದಿದಲ್ಲಿ ಅಧ್ಯಕ್ಷರ ಅಧಿಕಾರದ ಅವಧಿಯಲ್ಲಿ ಯಾವುದೇ ಇತರೆ ಅಧಿಕಾರವನ್ನು ಹೊಂದುವುದಿಲ್ಲವೆಂದು ಘೋಷಣಾ ಪತ್ರ ನೀಡುವುದು.

11. ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ಆಯ್ಕೆಗೊಂಡು ನೇಮಕವಾದರೆ, ಪ್ರಸ್ತುತ ಹೊಂದಿರುವ ಹುದ್ದೆ, ಸ್ಥಾನಕ್ಕೆ ರಾಜೀನಾಮೆ ನೀಡಲು ಅಥವಾ ಸ್ವಯಂ ನಿವೃತ್ತಿ ಪಡೆಯಲು ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಸೇವೆಗೆ ಸೇರಲು ಇಚ್ಛಾ ಪತ್ರ ನೀಡುವುದು.

12. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಅಭ್ಯರ್ಥಿಗಳ ಹೆಸರುಗಳನ್ನು ಆಯ್ಕೆ ಮಾಡುವಲ್ಲಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿರುತ್ತದೆ.

(ಜಿ. ಕುಮಾರ ನಾಯಕ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಇಂಧನ ಇಲಾಖೆ ಮತ್ತು
ಸಂಚಾಲಕರು, ಆಯ್ಕೆ ಸಮಿತಿ
ದೂರವಾಣಿ: 080-22252373
E-mail: prs.energy@gmail.com

For More Information Visit: www.kpscvaani.com

For More Information Visit: www.kpscvaani.com

ಅನುಬಂಧ

ನಮೂನೆ–1

1. ಅರ್ಜಿದಾರರ ಹೆಸರು ಮತ್ತು ವಿಳಾಸ :

2. ವಯಸ್ಸು ಮತ್ತು ಜನ್ಮ ದಿನಾಂಕ: :

3. ಈಗ ಹೊಂದಿರುವ ಸ್ಥಾನ :

4. ವಿದ್ಯಾರ್ಹತೆ :

5. ಈ ಹಿಂದೆ ಹೊಂದಿದ ಹುದ್ದೆಗಳ ವಿವರ :

6. ಮೇಲಿನ ಹುದ್ದೆಗಳಲ್ಲಿನ ಅನುಭವದ ದಾಖಲಾತಿ :

ಟಿಪ್ಪಣಿ: ವಿದ್ಯಾರ್ಹತೆ ಮತ್ತು ಅನುಭವಗಳ ಮತ್ತು ಅಧಿಸೂಚನೆಯಲ್ಲಿ ಕೋರಿರುವ ಇತರೆ ಮಾಹಿತಿಗಳ ಬಗ್ಗೆ ಅಗತ್ಯ ದಾಖಲಾತಿಗಳನ್ನು ಒದಗಿಸುವುದು.

ದಿನಾಂಕ:

ಸ್ಥಳ: ಸಹಿ

For More Information Visit: www.kpscvaani.com

For More Information Visit: www.kpscvaani.com

ಘೋಷಣೆಗಳು

1. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ನನ್ನ ಹೆಸರಿನಲ್ಲಾಗಲಿ ಅಥವಾ ನನ್ನ ಸಂಬಂಧಿಕರ ಹೆಸರಿನಲ್ಲಾಗಲಿ ಈ ಕೆಳಕಂಡ ಯಾವುದೇ ವ್ಯವಹಾರಗಳಲ್ಲಿ ತೊಡಗಿರುವ ಸಂಸ್ಥೆಗಳು/ಕಂಪನಿಗಳಲ್ಲಿ ವಾಣಿಜ್ಯ ಅಥವಾ ಆರ್ಥಿಕ ಹಿತಾಸಕ್ತಿ ಅಥವಾ ಸಮಾಲೋಚನೆ ಒಪ್ಪಂದ ಹೊಂದಿರುವುದಿಲ್ಲ.

i. ವಿದ್ಯುಚ್ಛಕ್ತಿ ಉತ್ಪಾದನೆ, ಪ್ರಸರಣ ಮತ್ತು ವಿತರಣಾ ಅಥವಾ ಪೂರೈಕೆ.
ii. ವಿದ್ಯುತ್ ಉತ್ಪಾದನೆಗೆ ಬಳಸಲಾದ ಯಾವುದೇ ಇಂಧನದ ತಯಾರಿಕೆ, ಮಾರಾಟ ಅಥವಾ ಪೂರೈಕೆ.
iii. ವಿದ್ಯುಚ್ಛಕ್ತಿಯ ಉತ್ಪಾದನೆ, ಪ್ರಸರಣ, ವಿತರಣ, ಪೂರೈಕೆ ಅಥವಾ ವಿದ್ಯುತ್ ಬಳಕೆಯ ಸಂಬಂಧದ ಯಂತ್ರಗಳ, ಸ್ಥಾವರಗಳ, ಉಪಕರಣಗಳ, ಸಂಬಂಧಿತ ಭಾಗದ ತಯಾರಿಕೆ, ಮಾರಾಟ, ಗುತ್ತಿಗೆ, ಬಾಡಿಗೆ, ಪೂರೈಕೆ ಅಥವಾ ಬೇರಾವುದೇ ರೀತಿಯ ವ್ಯವಹಾರ ಮತ್ತು
iv. ಮೇಲೆ (i), (ii) ಮತ್ತು (iii) ರ ವಿಷಯಗಳಿಗೆ ಸಂಬಂಧಿಸಿದಂತೆ, ವೃತ್ತಿಪರ ಸೇವೆ ಒದಗಿಸುವ ಯಾವುದಾದರು ಸಂಸ್ಥೆ.

ಸಹಿ

2. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ಆಯ್ಕೆಯಾದಲ್ಲಿ, ಆ ಹುದ್ದೆಯ ಕರ್ತವ್ಯಕ್ಕೆ ಅಡಚಣೆ ಉಂಟಾಗುವಂತಹ ಯಾವುದೇ ಆರ್ಥಿಕ ಅಥವಾ ಇನ್ನಿತರೆ ಹಿತಾಸಕ್ತಿ ಹೊಂದಿರುವುದಿಲ್ಲ.

ಸಹಿ

3. **ಘೋಷಣಾ ಪತ್ರ**

ನಾನು ಈ ಮೂಲಕ ಘೋಷಿಸುವುದೇನೆಂದರೆ, ವಿದ್ಯುಚ್ಛಕ್ತಿ ಕಾಯ್ದೆ, 2003, ಸೆಕ್ಷನ್ 84(3)ರನ್ವಯ ಒಂದು ವೇಳೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ನೇಮಕ ಹೊಂದಿದಲ್ಲಿ, ಅಧ್ಯಕ್ಷರ ಅಧಿಕಾರವಧಿಯಲ್ಲಿ ಯಾವುದೇ ಇತರೆ ಅಧಿಕಾರವನ್ನು ಹೊಂದುವುದಿಲ್ಲ.

ಸಹಿ

4. **ಘೋಷಣಾ ಪತ್ರ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹುದ್ದೆಗೆ ನೇಮಕಾತಿಯಾದಲ್ಲಿ, ಹಾಲಿ ಇರುವ ಹುದ್ದೆಗೆ ರಾಜೀನಾಮೆ ನೀಡುತ್ತೇನೆ ಅಥವಾ ಸ್ವಯಂ ನಿವೃತ್ತಿ ಪಡೆಯುತ್ತೇನೆ.

ಸಹಿ

For More Information Visit: www.kpscvaani.com